ಕರ್ನಾಟಕ ಸರ್ಕಾರ
<u>ತಾಂತ್ರಿಕ ಶಿಕ್ಷಣ ಇಲಾಖೆ</u>

ಸಂಖ್ಯೆ:ಬಿಟಿಇ/01/ಇಸಿಎಸ್(3)/2017

ಕಾರ್ಯದರ್ಶಿಯವರ ಕಛೇರಿ
ತಾಂತ್ರಿಕ ಪರೀಕ್ಷಾ ಮಂಡಳಿ
ಅರಮನೆ ರಸ್ತೆ, ಬೆಂಗಳೂರು-1,
ದಿನಾಂಕ:04-04-2017

<u>ಜ್ಞಾಪನ</u>

ವಿಷಯ: 2017 ರ ಏಪ್ರಿಲ್/ಮೇ ಡಿಪ್ಲೋಮ ಸೆಮಿಸ್ಟರ್ ಪ್ರಾಯೋಗಿಕ ಪರೀಕ್ಷೆ ನಡೆಸುವ ಕುರಿತು.
ಉಲ್ಲೇಖ: ಸರ್ಕಾರಿ ಆದೇಶ ಸಂಖ್ಯೆ: ಇಡಿ 57 2013 ಬೆಂಗಳೂರು ದಿನಾಂಕ: 17-4-2015

********

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ 2017 ರ ಏಪ್ರಿಲ್/ಮೇ ಸೆಮಿಸ್ಟರ್ ಪ್ರಾಯೋಗಿಕ ಪರೀಕ್ಷೆಗಳು ದಿನಾಂಕ:13-04-2017 ರಂದು ಆರಂಭಗೊಳ್ಳಲಿದ್ದು, ಪರೀಕ್ಷಕರ ಬದಲಾವಣೆ ಹಾಗೂ ಪ್ರಾಯೋಗಿಕ ಪರೀಕ್ಷೆಗಳನ್ನು ನಡೆಸುವ ಕುರಿತು ಸ್ಕೀಂ ಆಫ್ ವ್ಯಾಲ್ಯುಯೇಷನ್ ಸಹಿತ ಹೆಚ್ಚಿನ ಮಾಹಿತಿ ನೀಡುವ ಕಾರ್ಯಕ್ಕೆ ಈ ಕೆಳಕಂಡ ಬೋರ್ಡ್‌ಗಳ ಅಧ್ಯಕ್ಷರುಗಳನ್ನು ನಿಯೋಜಿಸಲಾಗಿದೆ.

ಪ್ರಯುಕ್ತ ಸದರಿ ಅಧ್ಯಕ್ಷರುಗಳು <u>ದಿನಾಂಕ:11-04-2017</u> ರಂದು ಕಡ್ಡಾಯವಾಗಿ ತಾಂತ್ರಿಕ ಪರೀಕ್ಷಾ ಮಂಡಳಿಯಲ್ಲಿ ವರದಿ ಮಾಡಿಕೊಂಡು ಪ್ರಾಯೋಗಿಕ ಪರೀಕ್ಷೆಗಳು ಸುಗಮವಾಗಿ ಜರುಗಲು ಅಗತ್ಯ ಕ್ರಮಕೈಗೊಂಡು ಪ್ರಾಯೋಗಿಕ ಪರೀಕ್ಷೆಗಳು ಮುಗಿಯುವವರೆಗೂ ಮಂಡಳಿಯಲ್ಲಿ ಕಾರ್ಯ ನಿರ್ವಹಿಸಲು ಸೂಚಿಸಲಾಗಿದೆ.

ಮುಂದುವರೆದು ಬೋರ್ಡ್‌ಗಳ ಅಧ್ಯಕ್ಷರುಗಳು ತಾವು ಯಾವುದೇ ಬದಲಾವಣೆಗಳನ್ನು ಮಾಡಿದಲ್ಲಿ ಎಲ್ಲಾ ಮಾಹಿತಿ ಮತ್ತು ದಾಖಲೆಗಳ ಸಹಿತ ವಿವರಗಳನ್ನು ಪಟ್ಟಿ ಮಾಡಿ ಕಾರ್ಯದರ್ಶಿಯವರಿಗೆ ಸಲ್ಲಿಸಲು ತಿಳಿಸಲಾಗಿದೆ. ತಮ್ಮನ್ನು ಸಂಪರ್ಕಿಸಿದ ಸಂಸ್ಥೆ/ಪ್ರಾಚಾರ್ಯರು/ಉಪನ್ಯಾಸಕರು/ಸಿಬ್ಬಂದಿ ಇತ್ಯಾದಿ ಅವರ ಮೊಬೈಲ್ ಸಂಖ್ಯೆ, ಅಂಚೆ ಪತ್ರ, ಇ-ಮೇಲ್, ಬದಲಾವಣೆಗೆ ಕಾರಣ ಹಾಗೂ ಇತರೇ ಎಲ್ಲಾ ವಿವರಗಳನ್ನು ವ್ಯವಸ್ಥಿತವಾಗಿ ಕಾಪಾಡಿಕೊಂಡು ಯಾವುದೇ ಗೊಂದಲಕ್ಕೆ ಅವಕಾಶವಿಲ್ಲದಂತೆ ಪ್ರಾಯೋಗಿಕ ಪರೀಕ್ಷಾ ಕಾರ್ಯಗಳು ಸಮರ್ಪಕವಾಗಿ ನಡೆಯುವಂತೆ ನೋಡಿಕೊಳ್ಳಲು ತಿಳಿಸಲಾಗಿದೆ. ತಪ್ಪಿದಲ್ಲಿ ಸರ್ಕಾರಿ ಆದೇಶದ ಅನ್ವಯ ಸೂಕ್ತ ಶಿಸ್ತು ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಲಾಗಿದೆ.

| | | | | |
|---|---|---|---|---|
| 1 | CE | B.Jayathirtha, Principal<br>Gpt, Mulabagilu | jayathirtha.bhakri@gmail.com | 9980812043 |
| 2 | E&E | U.V.Govekar,<br>Sl.Grade Lecturer, Gpt, Tumkur | govekaree@gmail.com | 9844164160 |
| 3 | SC | B.T.Markandeya, Sl.Grade Lecturer<br>DRR(G) Polytechnic, Davangere | markandeyabt@gmail.com | 9945797260 |
| 4 | CS | M.B.Tulase, Sl.Grade Lecturer<br>S.J.(G)Polytechnic, Bengaluru | thulase.mb@gmail.com | 9844120479 |
| 5 | E&C | P.Krishnappa, Principal<br>Govt. Polytechnic, Turuvekere | krishnappa.anu@gmail.com | 9448073813 |
| 6 | AT | R.P.Kiragi, Principal, Gpt, Kushtagi | rpkiragi@gmail.com | 9845701650 |
| 7 | CP | Pavana.P Sl.Grade Lecturer, Gwpt, Bengaluru | pavana.ash@gmail.com | 9483700252 |
| 8 | ME | Sunil.K Principal,Gpt, Athani | sunilsir123@gmail.com | 9448635163 |

ಸಂಸ್ಥೆಗಳ ಪ್ರಾಚಾರ್ಯರುಗಳು ಆಯಾ ಕೋರ್ಸ್‌ಗೆ ಸಂಬಂಧಪಟ್ಟ ಪ್ರಾಯೋಗಿಕ ಪರೀಕ್ಷೆ ಕುರಿತಾದ ಹೆಚ್ಚಿನ ತಿಳುವಳಿಕೆ ಹಾಗೂ ಮಾಹಿತಿಗಾಗಿ ಆಯಾ ಬೋರ್ಡ್‌ನ ಅಧ್ಯಕ್ಷರುಗಳನ್ನು ಸಂಪರ್ಕಿಸಲು ತಿಳಿಸಲಾಗಿದೆ.

ಕಾರ್ಯದರ್ಶಿ

ಇವರಿಗೆ,

1. ರಾಜ್ಯದ ಎಲ್ಲಾ ಪಾಲಿಟೆಕ್ನಿಕ್ ಪ್ರಿನ್ಸಿಪಾಲರುಗಳಿಗೆ – ಮಾಹಿತಿ ಮತ್ತು ಮುಂದಿನ ಕ್ರಮಕ್ಕಾಗಿ
2. ಮೇಲ್ಕಂಡ ಪರೀಕ್ಷಕರ ಸಮಿತಿಗಳ ಅಧ್ಯಕ್ಷರುಗಳಿಗೆ – ಅಗತ್ಯ ಕ್ರಮಕ್ಕಾಗಿ

ಪ್ರತಿ: 1. ಗಣಕ ಕೇಂದ್ರ – ವೆಬ್‌ಪೋರ್ಟಲ್‌ನಲ್ಲಿ ಪ್ರಕಟಿಸಲು
2. ಇ ಆಡಳಿತ – ವೆಬ್‌ಸೈಟ್‌ನಲ್ಲಿ ಪ್ರಕಟಿಸಲು
3. ಪರೀಕ್ಷಾ ವಿಭಾಗದ ಅಧಿಕಾರಿಗಳು/ಸಿಬ್ಬಂದಿ ವರ್ಗ
4. ಇಸಿಎಸ್ ವಿಭಾಗ